# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 169 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12.08.2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಸೇವಾ ಕ್ಷೇತ್ರದ ವ್ಯಕ್ತಿಗಳಿಗೆ ಟ್ರೇಡ್ ಲೈಸೆನ್ಸ್ ಪಡೆಯುವುದು ಕಡ್ಡಾಯವೇ; | • ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ-1976 ಕಲಂ 353 ಹಾಗೂ ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಕಲಂ 256ರನ್ವಯ ನಗರ ಸ್ಥಳೀಯ ಸಂಸ್ಥೆ ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು ಮಾಡಲು ಉದ್ದಿಮೆ ಪರವಾನಿಗೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. |
| ಆ) | ಟ್ರೇಡ್ ಲೈಸೆನ್ಸ್ ಜಾರಿಯ ಮೂಲಕ ರಾಜ್ಯ ಸರ್ಕಾರಕ್ಕೆ ಆಗುವ ಆದಾಯ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | • 2024-25 ನೇ ಸಾಲಿನಲ್ಲಿ ಉದ್ದಿಮೆ ಪರವಾನಿಗೆ ನೀಡುವುದರಿಂದ ಸಂಗ್ರಹಿಸಲಾದ ಶುಲ್ಕದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ ನೀಡಿದೆ.**<br>• ಉದ್ದಿಮೆ ಪರವಾನಿಗೆಯಿಂದ ಸಂಗ್ರಹಿಸಲಾದ ಶುಲ್ಕವನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳೇ ಬಳಕೆ ಮಾಡಿಕೊಳ್ಳುತ್ತವೆ. |
| ಇ) | ರಾಜ್ಯದಲ್ಲಿ ಎಲ್ಲಾ ಮಹಾನಗರ ಪಾಲಿಕೆಯು ಟ್ರೇಡ್ ಲೈಸೆನ್ಸ್ ನೀಡುವಲ್ಲಿ, ಏಕೀಕೃತ ಮಾರ್ಗದರ್ಶಕ ತತ್ವವನ್ನು ಅನುಸರಿಸುತ್ತಿದೆಯೇ; ವಿವರ ಒದಗಿಸುವುದು) | ಹೌದು.<br>• ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ-1976 ಪ್ರಕರಣ 353 ರಡಿ ವಿವರಿಸಿರುವಂತೆ ಮಹಾನಗರ ಪಾಲಿಕೆಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 15 ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದ್ದು ಈ ಕೆಳಕಂಡ ದಾಖಲಾತಿಗಳನ್ನು ಪಡೆದು ಉದ್ದಿಮೆ ಪರವಾನಿಗೆ ನೀಡಲಾಗುತ್ತಿದೆ.<br>1) ಮಾಲೀಕತ್ವದ ಪುರಾವೆ/ಬಾಡಿಗೆ ಕರಾರು<br>2) ಅಫಿಡವಿಟ್<br>3) ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಶೀದಿ<br>4) ಬಾಡಿಗೆಯಾದಲ್ಲಿಉದ್ದಿಮೆ ನಡೆಸಲು ಮಾಲೀಕರ ನಿರಾಕ್ಷೇಪಣಾ ಪತ್ರ<br>• ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 25 ತುಮಪಾ 2022 (ಇ) ದಿನಾಂಕ: 20.10.2022 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 281 ಜಿಇಎಲ್ 2022, ದಿನಾಂಕ: 18.10.2022ರಲ್ಲಿ ರಾಜ್ಯದ ಮಹಾನಗರ ಪಾಲಿಕೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉದ್ದಿಮೆ/ವಾಣಿಜ್ಯ ಪರವಾನಿಗೆಯನ್ನು ಪಾರದರ್ಶಕವಾಗಿ ಮತ್ತು ತ್ವರಿತವಾಗಿ ನೀಡುವ ದೃಷ್ಟಿಯಿಂದ ಕಡ್ಡಾಯವಾಗಿ ಕಾಲಮಿತಿಯೊಳಗೆ ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. |

| | | |
|---|---|---|
| ಈ) | ಟ್ರೇಡ್ ಲೈಸೆನ್ಸ್ ದೊರೆಯುವ ಪ್ರಕ್ರಿಯೆಯಲ್ಲಿ ಸಾಗುತ್ತಿರುವ ವಿಳಂಬ ಅಧಿಕಾರಿಗಳಿಂದ ಆಗುತ್ತಿರುವ ಭ್ರಷ್ಟಾಚಾರದ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | • ಉದ್ದಿಮೆ ಪರವಾನಿಗೆ ಪಡೆಯಲು ಅನುಕೂಲವಾಗುವಂತೆ ಎಲ್ಲಾ ಮಹಾನಗರ ಪಾಲಿಕೆಗಳಲ್ಲೂ ವ್ಯಾಪಾರ ತಂತ್ರಾಂಶವನ್ನು ಬಳಕೆ ಮಾಡಲಾಗುತ್ತಿದ್ದು, ಏಕ ರೀತಿಯ ಕಾರ್ಯ ವಿಧಾನವನ್ನು ಅನುಸರಿಸಿ ಉದ್ದಿಮೆ ಪರವಾನಿಗೆಯನ್ನು ನೀಡಲಾಗುತ್ತಿದೆ.<br>• ಉದ್ದಿಮೆ ಪರವಾನಿಗೆಯನ್ನು ಸಕಾಲ ಸೇವೆಯಡಿ ತರಲಾಗಿದ್ದು, ಗರಿಷ್ಟ 15 ದಿನಗಳ ಕಾಲಾವಧಿಯಲ್ಲಿ ನೀಡಲಾಗುತ್ತಿದೆ.<br>• ವಿಳಂಬ ಅಥವಾ ಭ್ರಷ್ಟಾಚಾರದ ಕುರಿತು ಪ್ರಕರಣಗಳು ಕಂಡು ಬಂದಿರುವುದಿಲ್ಲ. |
| ಉ) | ಲೈಸೆನ್ಸ್ ಶುಲ್ಕದಲ್ಲಿ ಪ್ರದೇಶಾನುಸಾರ ಭಿನ್ನತೆ ಇರುವುದೇ ಇದನ್ನು ಏಕೀಕರಿಸುವ ಕುರಿತು ಸರ್ಕಾರದ ನಿಲುವೇನು? | • ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ-1976 ಪ್ರಕರಣ 423 ಹಾಗೂ ಕರ್ನಾಟಕ ಪೌರಸಭೆಗಳ ಅಧಿನಿಯಮ -1964 ಪ್ರಕರಣ 324 ರಲ್ಲಿನ ಅವಕಾಶದಂತೆ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಉದ್ದಿಮೆ ಶುಲ್ಕ ನಿಗದಿಪಡಿಸಿ ಬೇಡಿಕೆಯನುಸಾರವಾಗಿ ವಸೂಲಿ ಮಾಡಲು ಅವಕಾಶವಿರುತ್ತದೆ.<br>• ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಕೌನ್ಸಿಲ್ ನಿರ್ಣಯದ ಅನುಸಾರ ಪ್ರದೇಶಾನುಸಾರವಾಗಿ ಉದ್ದಿಮೆ ಪರವಾನಿಗೆ ಶುಲ್ಕ ನಿಗದಿ ಮಾಡಲಾಗುತ್ತದೆ.<br>• ಉದ್ದಿಮೆ ಪರವಾನಿಗೆ ಶುಲ್ಕವನ್ನು ಏಕೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ನಅಇ 235 ಎಂಎನ್‌ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

ಅನುಬಂಧ

# Trade License Collection Details

( Rs. In Lakhs )

| SL.No | ULB Name | 2022-23 | 2023-24 | 2024-25 | 2025-26 (Upto July 2025) |
|---|---|---|---|---|---|
| 1 | Bagalakote | 37.22 | 99.84 | 69.07 | 23.46 |
| 2 | Ballari | 70.27 | 94.01 | 136.89 | 40.70 |
| 3 | Belagavi | 158.55 | 241.84 | 279.98 | 109.79 |
| 4 | Bengaluru Rural | 44.81 | 108.23 | 159.68 | 56.78 |
| 5 | Bengaluru Urban | 72.02 | 214.31 | 230.58 | 153.20 |
| 6 | Bidar | 101.83 | 112.46 | 106.67 | 31.77 |
| 7 | Chamarajanagara | 212.36 | 56.92 | 69.32 | 17.23 |
| 8 | Chikkaballapura | 92.23 | 69.35 | 65.44 | 69.87 |
| 9 | Chikkamagaluru | 157.02 | 106.49 | 99.38 | 43.14 |
| 10 | Chitradurga | 52.11 | 70.97 | 64.32 | 29.48 |
| 11 | Dakshina kannada | 31.77 | 427.00 | 647.96 | 232.51 |
| 12 | Davanagere | 144.98 | 142.15 | 179.83 | 98.04 |
| 13 | Dharwada | 69.64 | 263.50 | 248.04 | 117.42 |
| 14 | Gadag | 40.47 | 88.35 | 114.39 | 34.20 |
| 15 | Hassan | 41.22 | 147.68 | 164.14 | 55.45 |
| 16 | Haveri | 42.92 | 86.47 | 84.83 | 30.80 |
| 17 | Kalaburagi | 278.42 | 187.65 | 57.76 | 74.31 |
| 18 | Kodagu | 93.46 | 98.39 | 107.89 | 68.51 |
| 19 | Kolara | 66.29 | 79.08 | 121.04 | 37.22 |
| 20 | Koppal | 162.36 | 65.45 | 68.61 | 31.06 |
| 21 | Mandya | 699.72 | 101.22 | 96.17 | 43.75 |
| 22 | Mysuru | 99.83 | 670.56 | 697.05 | 432.83 |
| 23 | Raichur | 69.694 | 65.24 | 73.63 | 36.31 |
| 24 | Ramanagara | 245.77 | 117.28 | 104.43 | 33.65 |
| 25 | Shivamogga | 136.2 | 160.82 | 158.22 | 44.55 |
| 26 | Tumakuru | 59.41 | 273.89 | 391.76 | 54.00 |
| 27 | Udupi | 100.46 | 177.24 | 184.28 | 104.27 |
| 28 | Uttara Kannada | 89.76 | 116.10 | 107.32 | 41.30 |
| 29 | Vijapura | 783.42 | 119.73 | 54.94 | 54.88 |
| 30 | Vijayanagara | 42.98 | 50.84 | 82.41 | 26.58 |
| 31 | Yadagiri | 24.74 | 41.21 | 43.15 | 21.53 |
| | Grand Total | 4321.93 | 4654.27 | 5069.17 | 2248.57 |

ಸಹಾಯಕ ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು